ದಿನಾಂಕ: 07.12.2020 ರಂದು ಸಮಯ ಬೆಳಿಗ್ಗೆ 11.30 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀಮತಿ ಕೆ ಸ್ವಯಂಪ್ರಭಾ, ಅದೀಕ್ಷಕ ಅಭಿಯಂತರರು (ಪಶ್ಚಿಮ) ವಲಯ **(ಅಧ್ಯಕ್ಷರು)**
2. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. **(ಕಾರ್ಯದರ್ಶಿ)**
3. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
4. ಶ್ರೀ ನಂಜೇಗೌಡ ಬಿ.ವಿ ಸದಸ್ಯರು.
5. ಶ್ರೀಮತಿ ಕಮಲ ಡಿ ಸದಸ್ಯರು.
6. ಶ್ರೀ ರಾಜೇಶ್ ಸದಸ್ಯರು.
7. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
8. ಶ್ರೀ ಡಾ|| ನಾಗೇಂದ್ರ ಸದಸ್ಯರು.
9. ಶ್ರೀ ವೆಂಕಟೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
10. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
11. ಶ್ರೀ ಛಾಯಾಪತಿ ಎಂ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಸೋಮನಾಥ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
13. ಶ್ರೀ ರಾಜಶೇಖರ್ ಕಿರಿಯ ಅಭಿಯಂತರರು, ಬೆಸ್ಕಾಂ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ
14. ಶ್ರೀ ಶಿವರಾಂ ವಲಯ ಅರಣ್ಯಾ ಸಂರಕ್ಷಣಾಧಿಕಾರಿಗಳು ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
15. ಶ್ರೀ ನಿಂಗರಾಜ ಕಂದಾಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

1. ಮಾನ್ಯ ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಓದಿ ತಿಳಿಸಿದರು.
2. ಮಾನ್ಯ ಆಧ್ಯಕ್ಷರು ಹಾಗೂ ಮಾನ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಗಳನ್ನು ಸಭೆಗೆ ತಿಳಿಸುವಂತೆ ಸೂಚಿಸಿದರು.
3. ಸಾರ್ವಜನಿಕರು ಸೋಮೇಶ್ವರನಗರ 2ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಲೈನ್ ಸಮಸ್ಯೆ ಬಗ್ಗೆ ಹೇಳಿದರುಇದಕ್ಕೆ ಮಾನ್ಯ ಕಾರ್ಯದರ್ಶಿಗಳು ಸಂಬಂಧಪಟ್ಟ ಅಧಿಕಾರಿಗಳಿ ಈಗಾಗಲೇ ಸೂಚಿಸಲಾಗಿದೆ ಎಂದು ತಿಳಿಸಿದರು.
4. ಶ್ರೀ ಪಚ್ಚಿಯಪ್ಪನ್ ಒಂಟಿ ಮನೆ ಫಲಾನುಭವಿ ರವರು ಅವರ ಒಂಟಿ ಮನೆ ನಿರ್ಮಾಣದ ಬಿಲ್ಲಿನ ಬಗ್ಗೆ ಮಾಹಿತಿ ಕೋರಿದರು. ಸಂಬಂಧಪಟ್ಟ ವಾರ್ಡ್ ಅಭಿಯಂತರರು ಬಿಲ್ಲನ್ನು ನಮ್ಮ ಕಛೇರಿಯಿಂದ ಕಳುಹಿಸಲಾಗಿದೆ ಎಂದು ಉತ್ತರಿಸಿದರು.



Scanned with CamScanner

5. ಶ್ರೀ ಶಿವರಾಜ್ ಗಜಾನನ ಸ್ಲಂ-1 ರಲ್ಲಿ ಕಾವೇರಿ ನೀರಿನ ಕೋಳಾಯಿಗಳು ಹೊಡೆದು ಹೋಗಿರುತ್ತವೆ ಅದನ್ನು ಸರಿಪಡಿಸಿಕೊಡುವಂತೆ ಕೋರಿದರು. ಇದಕ್ಕೆ ಮಾನ್ಯ ಕಾರ್ಯದರ್ಶಿಗಳು ಸಂಬಂಧಪಟ್ಟ ಅಧಿಕಾರಿಗಳಿ ಸೂಚಿಸುತ್ತೇವೆ ಎಂದು ತಿಳಿಸಿದರು.

6. ಶ್ರೀ ಡಾ॥ ನಾಗೇಂದ್ರ ರವರು ಕಂದಾಯ ವಸೂಲಿ ಬಾಕಿ ಇರುವ ಪಟ್ಟಿಯನ್ನು ನಾನು ಈ ಹಿಂದೆ ಸಭೆಯಲ್ಲಿ ಕೋರಲಾಗಿತ್ತು ಸಂಬಂಧಪಟ್ಟ ಅಧಿಕಾರಿಗಳ ನೀಡುತ್ತೇವೆ ಎಂದು ತಿಳಿಸಿದ್ದರು ಆದರೆ ಇನ್ನೂ ನೀಡಿಲ್ಲ ಎಂದು ತಿಳಿಸಿದರು. ಇದಕ್ಕೆ ಸಂಬಂಧಪಟ್ಟ ಕಂದಾಯ ಪರಿವೀಕ್ಷಕರು ಇಂದೇ ಮಾಹಿತಿಯನ್ನು ನೀಡುತ್ತೇನೆ ಎಂದು ತಿಳಿಸಿದರು.

7. ಮಾನ್ಯ ಅಧ್ಯಕ್ಷರು ಕಿರಿಯ ಅಭಿಯಂತರರು ಬೆಸ್ಕಾಂ ರವರಿಗೆ ಎಲೆಕ್ಟ್ರಿಕ್ ಲೈನ್‌ಗೆ ತಗಲುವ ಮರದ ಕೊಂಬೆಗಳನ್ನು ಕಟಾವುಮಾಡಿ ಸಾಗಿಸುತ್ತಿರುವಿರ ಎಂದು ಕೇಳಿದರು. ಇದಕ್ಕೆ ಕಿರಿಯ ಅಭಿಯಂತರರು ನಾವೇ ಸಾಗಿಸುತ್ತಿದ್ದೇವೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು ದಪ್ಪದಾದ ಮರದ ಕೊಂಬೆಗಳನ್ನು ಕಟಾವು ಮಾಡಿದ ತಕ್ಷಣ ಸಾಗಿಸುವಂತೆ ಸೂಚಿಸಿದರೆ ಇಲ್ಲವಾದರೆ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಆಗುತ್ತದೆ ಎಂದು ತಿಳಿಸಿದರು.

8. ಕಾರ್ಯದರ್ಶಿಗಳು ಗಜಾನನ ಸ್ಲಂ-2 ರಲ್ಲಿ ಎಲೆಕ್ಟ್ರಿಕ್ ವೈರ್‌ಗಳು ಸುಟ್ಟು ಹೋಗಿರುತ್ತವೆ ಆದ್ದರಿಂದ ಹೊಸದಾದ ಎಲೆಕ್ಟ್ರಿಕ್ ಲೈನ್ ನಿರ್ಮಿಸಲು ಸೂಚಿಸಿದರು. ಇದಕ್ಕೆ ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳು ಈ ಕೂಡಲೇ ನಿರ್ಮಿಸಿ ಸರಿಪಡಿಸುವುದಾಗಿ ಎಂದು ತಿಳಿಸಿದರು.

9. ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರು ವಾರ್ಡ್‌ನಲ್ಲಿ ಜೋತು ಬಿದ್ದ ಕೇಬಲ್‌ಗಳನ್ನು ತೆಗಿಸುವಂತೆ ಸೂಚಿಸಿದರು. ಇದಕ್ಕೆ ಬೆಸ್ಕಾಂ ಅಧಿಕಾರಗಳು ತೆಗೆಯಲಾಗುವುದು ಎಂದು ತಿಳಿಸಿದರು.

10. ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರುವಾರ್ಡ್‌ನಲ್ಲಿರುವ ಪ್ರತಿಮೆಗಳನ್ನು ಖಾಸಗಿಯವರಿಗೆ ನಿರ್ವಹಣೆಗೆ ನೀಡಿದರೆ ಇದರಿಂದ ಪ್ರತಿಮೆಗಳ ಹತ್ತಿರ ಕಸ ಹಾಕುವುದು ಸಮಸ್ಯೆ ಕಡಿಮೇ ಹಾಗುತ್ತವೆ ಹಾಗೂ ಪ್ರತಿಮೆಗಳು ನೋಡಲು ಸ್ವಚ್ಚವಾಗಿ ಕಾಣಿಸುತ್ತವೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಇದು ಒಳ್ಳಯೆ ಸಲಹೆ ಇದನ್ನು ಕಾರ್ಯ ರೂಪಕ್ಕೆ ತರಲು ಸಂಬಂದಪಟ್ಟ ಮೇಲಾಧಿಕಾರಿಗಳ ಹತ್ತಿರ ಚರ್ಚಿಸುತ್ತೇನೆ ಎಂದು ತಿಳಿಸಿದರು.

11. ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರು ಎ.ಪಿ.ಎಂ.ಸಿ ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ನೋಟೀಸ್ ನೀಡಿರುವುದಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ತಿಳಿಸಿರುತ್ತಾರೆ ಆದ್ದರಿಂದ ನೋಟೀಸ್ ನಕಲು ಪ್ರತಿಯನ್ನು ನೀಡಿ ಎಂದು ಕೋರಿದರು. ಇದಕ್ಕೆ ಸಾಹಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮುಂದಿನ ಸಭೆಯಲ್ಲಿ ನೀಡಲಾಗುವುದ ಎಂದು ತಿಳಿಸಿದರು.

12. ಕಾರ್ಯದರ್ಶಿಗಳು ಗೌವತಮನಗರದಲ್ಲಿ ಮ್ಯಾನ್‌ಹೋಲ್ ಸಮಸ್ಯೆ ಇತ್ತು ಸಮಸ್ಯೆ ಪರಿಹಾರ ಆಗಿದೆಯ ಎಂದು ಕೇಳಿದರು ಇದಕ್ಕೆ ಸಾಹಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಪರಿಹರಿಸಿದ್ದೆನೆ ಎಂದು ತಿಳಿಸಿದರು.

13. ಶ್ರೀ ಜಯಪಾಲ್ ಸದಸ್ಯರು ರವರು ಬೆಲ್ವಾಡಿ ಫ್ಯಾಕ್ಟರಿ ಹಿಂದಿನ ರಸ್ತೆಯಲ್ಲಿ ಸೀಪೇಜ್ ಹಾಗುತ್ತಿದೆ ಎಂದು ತಿಳಿಸಿದರು. ಇದಕ್ಕೆ ಸಾಹಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಈ ಸಮಸ್ಯೆಗೆ ಪಿ.ವಿ.ಸಿ ಪೈಪ್‌ಗಳನ್ನು ಅಳವಡಿಸಿರುತ್ತೇನೆ ಆಗ ಸಮಸ್ಯೆ ಪರಿಹಾರ ಆಗಿತ್ತು, ಆದರೆ ಈಗ ಸಮಸ್ಯೆ ಮತ್ತೆ ಬಂದಿದೆ ಪರಿಹರಿಸುತ್ತೇನೆ ಎಂದು ತಿಳಿಸಿದರು.

14. ಕಾರ್ಯದರ್ಶಿಗಳು ಗೌತಮನಗರದ ಆಟದ ಮೈದಾನದಲ್ಲಿರುವ ಶೆಡ್‌ಗಳನ್ನು ತೆರವುಗೊಳಿಸ ಬೇಕು ಎಂದು ಸಭೆಯಲ್ಲಿ ತಿಳಿಸಿದರು ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸದಸ್ಯರು ಒಂದು ಸಮಯ ನಿಗದಿಪಡಿಸಿ ನಾವೆಲ್ಲರು ಮತ್ತು ಪೋಲೀಸ್ ಇಲಾಖೆಯವರೊಂದಿಗೆ ಸ್ಥಳಕ್ಕೆ ಬೇಟಿ ನೀಡಿ ತೆರವುಗೊಳಿಸೋಣ ಎಂದು ತಿಳಿಸಿದರು.



Scanned with CamScanner

15. ಶ್ರೀ ಡಾ|| ನಾಗೆಂದ್ರ ಸದಸ್ಯರು ರವರುಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋವಿಡ್-19 ಸಂಬಂಧಿಸಿದ ಮಾಹಿತಿಯನ್ನು ಸಭೆಗೆ ತಿಳಿಸಿ ಎಂದು ಕೋರಿದರು. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಕೋವಿಡ್-19 ಸಂಬಂಧಿತ ಮಾಹಿತಿಯನ್ನು ಸಭೆಗೆ ಓದಿ ತಿಳಿಸಿದರು.

16. ಶ್ರೀ ಕೃಷ್ಣಸ್ವಾಮಿ ಸಾರ್ವಜನಿಕರು ಮುತ್ತು ಮಾರಮ್ಮ ದೇವಸ್ಥನದ ಹತ್ತಿರ ನಿರ್ಮಾಣವಾಗಿರುವ ರಸ್ತೆಯಯ ತಿರುವನ್ನು ಸರಿಪಡಿಸಿ ನೇರ ರಸ್ತೆಯನ್ನು ನಿರ್ಮಿಸಿಕೊಡಬೇಕೆಂದು ಸಭೆಯಲ್ಲಿ ಕೋರಿದರು, ಇದಕ್ಕೆ ಸಂಬಂಧಿಸಿದ ವಾರ್ಡ್ ಅಭಿಯಂತರರು ಸ್ಥಳ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

17. ಶ್ರೀರಾಜೇಶ್ ಸದಸ್ಯರು ರವರು ಬೀದಿ ಬದಿ ವ್ಯಾಪಾರಿಗಳು ಶಂಕರನಗರದ ಮುಖ್ಯರಸ್ತೆಯಲ್ಲಿ ಮುಂಜಾನೆ ಗಲಾಟೆ ಮಾಡುತ್ತಿರುತ್ತಾರೆ ಸಿಗರೇಟ್ ತಂಬಾಕು ವ್ಯಸನಗಳನ್ನು ಬಳಸುತ್ತಿರುತ್ತಾರೆ ಇದರಿಂದ ಶಂಕರನಗರದ ಮುಖ್ಯರಸ್ತೆಯ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ಸಭೆಗೆ ಶಂಕರನಗರ ನಿವಾಸಿಗಳ ವೇದಿಕೆ (ರಿ) ಯಿಂದ ಪತ್ರ ಸಲ್ಲಿಸಿರುತ್ತಾರೆ. ಆದರೆ ಸಮಸ್ಯೆ ಪರಿಹಾರ ಆಗಿಲ್ಲ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ನಿಮ್ಮ ಅಸೋಸಿಯೇಶನ್ ನಿಂದ ನಿವಾಸಿಗಳ ಸಭೆಯನ್ನು ಕರೆದು ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಲು ಒಂದು ಸಮಯ ನಿಗದಿಪಡಿಸಿ ವಾರ್ಡ್ ಕಮಿಟಿ ಸದಸ್ಯರು, ಸಂಬಂಧಪಟ್ಟ ಅಧಿಕಾರಿಗಳು ಮತ್ತು ಪೋಲೀಸ್ ಸಿಬ್ಬಂದಿ ರವರು ಸ್ಥಳಕ್ಕೆ ಬೇಟಿ ನೀಡಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು ಹಾಗೂ ಈ ಕ್ರಮಕ್ಕೆ ನಿವಾಸಿಗಳ ಬೆಂಬಲ ತುಂಬ ಅಗತ್ಯ ಎಂದು ತಿಳಿಸಿದರು.

18. ಶ್ರೀ ರಾಜೇಶ್ ಸದಸ್ಯರು ರವರು 1ನೇ ಮತ್ತು 10ನೇ ಮುಖ್ಯರಸ್ತೆಯಲ್ಲಿ ತುಂಬಾ ವಾಹನದ ಅಪಘಾತಗಳು ಅಗುತ್ತಿರುತ್ತವೆ ಆದ್ದರಿಂದ ರಸ್ತೆ ಉಬ್ಬುಗಳನ್ನು ನಿರ್ಮಿಸಬೇಕು ಎಂದು ಕೋರಿದರು. ಇದಕ್ಕೆ ವಾರ್ಡ್ ಅಭಿಯಂತರರು ರಸ್ತೆ ಉಬ್ಬುಗಳನ್ನು ನಿರ್ಮಿಸುವಂತಿಲ್ಲ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಟ್ರಾಫಿಕ್ ಇಂಜಿನಿಯರಿಂಗ್ ಸೇಲ್ ರವರಿಗೆ ತಾವು ಪತ್ರ ರೂಪದಲ್ಲಿ ಸಮಸ್ಯೆಯನ್ನು ನೀಡಿದಲ್ಲಿ ಸಂಬಂದಪಟ್ಟ ಇಲಾಖೆರವರಿಗೆ ನಿರ್ಮಿಸುವಂತೆ ಸೂಚಿಸುತ್ತೇವೆ ಎಂದು ತಿಳಿಸಿದರು.

19. ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

**ಅಧ್ಯಕ್ಷರು**

K. Swarupa... (signature) 9/12/2020

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44

ಮಾರಪ್ಪನಪಾಳ್ಯ



Scanned with CamScanner